**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 395/2018**
**ಚಾಸಾ - 07** / ಪ್ರಾಸಾ- 6

| | |
|---|---|
| ಹೆಸರು | **ಮಂಜುನಾಥ** |
| ತಂದೆಯ ಹೆಸರು | ಕೃಷ್ಣಮೂರ್ತಿ |
| ವಯಸ್ಸು | **51** |
| ಉದ್ಯೋಗ | **ಎಸ್ ಐ , ಬೆಂಗಳೂರು** |
| ವಿಳಾಸ | **ಬೆಂಗಳೂರು** |

**ದಿನಾಂಕ:17-10-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ನಾನು 2012 ರಿಂದ 2018 ವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 13-12-2017 ರಂದು ರಾತ್ರಿ 07.30 ಗಂಟೆಯ ಸಮಯದಲ್ಲಿ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ ಮೇರೆಗೆ ಠಾಣಾ ಮೊಕದ್ದಮೆ ನಂ.409/2017 ಎಂದು ನಮೂದಿಸಲಾಯಿತು. ಸದರಿ ಮೊಕದ್ದಮೆ ನಂ. ಕಲಂ 323, 324, 341, 504 ಮತ್ತು 506 ಸಹವಾಚಕ 34 ಐಪಿಸಿ ಯ ರೀತ್ಯ ಪ್ರಕರಣ ದಾಖಲು ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-1ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-5 ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ದಿನಾಂಕ 14-12-2017 ರಂದು ಬೆಳಿಗ್ಗೆ 8.00 ರಿಂದ 8.30 ಗಂಟೆವರೆಗೆ ಚಾಸಾ-3ರವರು ತೋರಿಸಿದ ಜಾಗದಲ್ಲಿ ನಿಪಿ-2ರಂತೆ ಪಂಚನಾಮೆಯನ್ನು ಚಾಸಾ-3ದ 5 ಮತ್ತು 6ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ನಿಪಿ-02 ಅನ್ನು

ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕೃತ್ಯಕ್ಕೆ ಬಳಸಿದ ಒಂದು ಪೊರಕೆ ಮತ್ತು ಒಂದು ದೊಣ್ಣೆಯನ್ನು ವಶಪಡಿಸಿಕೊಳ್ಳಲಾಯಿತು. ಈಗ ಸಾಕ್ಷಿಗೆ ಮುದ್ದೆ ಮಾಲು-1 ಮತ್ತು 2ನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಯಿತು. ಮುದ್ದೆ ಮಾಲು-1 ಮತ್ತು 2ನ್ನು ಠಾಣಾ ಮಾಲುಪಟ್ಟಿ ಸಂ. 166/2017 ರಂತೆ ದಾಖಲು ಮಾಡಲಾಯಿತು. ಈಗ ಸಾಕ್ಷಿಗೆ ಮಾಲುಪಟ್ಟಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮಾಲುಪಟ್ಟಿಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ದಿ.14-12-2017 ರಂದು ಚಾಸಾ-1ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಈಗ ಸಾಕ್ಷಿಗೆ ಚಾಸಾ-1ರವರ ಮುಂದುವರೆದ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಹೇಳಿಕೆಯನ್ನು ನಿಪಿ-7ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-2 ರಿಂದ 4ರವರ ಹೇಳಿಕೆ ಯನ್ನು ಪಡೆದುಕೊಳ್ಳಲಾಯಿತು. ಈಗ ಸಾಕ್ಷಿಗೆ ಚಾಸಾ-2ರವರ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಹೇಳಿಕೆಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-3 ಮತ್ತು 4 ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ತನಿಖೆಗೆ ಕಡತವನ್ನು ಚಾಸಾ-08 ರವರಿಗೆ ವರ್ಗಾವಣೆ ಮಾಡಲಾಯಿತು.

ಪಾಟೀ **ಸವಾಲು- ಆರೋಪಿಗಳ ಪರ ಶ್ರೀ. ಎಸ್ ಜಿ. ಆರ್, ವಕೀಲರಿಂದ-**

**01.** ನಿಪಿ-1ರಂತೆ ದೂರನ್ನು ದಾಖಲಿಸುವ 8 ರಿಂದ 10 ದಿನಗಳ ಮೊದಲು ಆರೋಪಿಗಳು ಚಾಸಾ-1, ಅವರ ಅಣ್ಣ ಮತ್ತು ಅವರ ಕುಟುಂಬದವರ ವಿರುದ್ದ ಬೆಳೆಯನ್ನು ನಾಶ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ದೂರನ್ನು ಸಲ್ಲಿಸಿದ್ದರು ಮತ್ತು

ಸದರಿ ದೂರಿನ ಆಧಾರದ ಮೇಲೆ ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1ರಂತೆ ದೂರನ್ನು ಸ್ವೀಕರಿಸುವ ಸಮಯದಲ್ಲಿ ನಾನು ಯಾವುದೇ ಪ್ರಾಥಮಿಕ ತನಿಖೆಯನ್ನು ಮಾಡಿರುವುದಿಲ್ಲ. ಮರದ ದೊಣ್ಣೆ ಮತ್ತು ಬಿದಿರು ದೊಣ್ಣೆ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ಮತ್ತು ಚಾಸಾ-1ರವರ ನಡುವೆ ಯಾವುದೇ ಗಲಾಟೆ ಆಗದೇ ಇದ್ದರೂ ಸಹ ಚಾಸಾ-1ರವರು ಆರೋಪಿಗಳ ಮೇಲೆ ಇದ್ದ ದ್ವೇಷದಿಂದ ಅವರ ವಿರುದ್ದ ಸುಳ್ಳು ದೂರನ್ನು ನೀಡಿದರು ಮತ್ತು ಆದರ ಆಧಾರದ ಮೇಲೆ ನೀವು ಸುಳ್ಳು ಎಫ್. ಐ. ಆರ್ ನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರಲ್ಲಿ ಪ್ರತ್ಯೇಕ್ಷ ಸಾಕ್ಷಿದಾರರು ಮತ್ತು ಜಗಳವನ್ನು ಬಿಡಿಸಿರುವ ವ್ಯಕ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಅದಕ್ಕೆ ಸಂಬಂಧಿಸಿದಂತೆ ಮುಂದುವರೆದ ಹೇಳಿಕೆಯಲ್ಲಿ ಪಡೆದುಕೊಳ್ಳಲಾಗಿದೆ ಎನ್ನುತ್ತಾರೆ.

02. ಪಂಚನಾಮೆಯನ್ನು ಮಾಡುವ ಜಾಗವನ್ನು ಚಾಸಾ-1ರವರು ನಿಮಗೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಗೆ ಸಹಕರಿಸುವಂತೆ ಹೇಳಿ ನಾನು ಸಾಕ್ಷಿದಾರರಿಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಹೇಳಿರುತ್ತೇನೆ. ಪಂಚನಾಮೆಗೆ ಬರುವಂತೆ ಸಾಕ್ಷಿದಾರರಿಗೆ ನೋಟಿಸ್ ನ್ನು ನೀಡಬೇಕು ಎಂಬ ನಿಯಮ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ನಿಪಿ-2ರಂತೆ ಪಂಚನಾಮೆಯನ್ನು ಮಾಡಿಲ್ಲ ಮತ್ತು ನಿಪಿ-2ನ್ನು ಠಾಣೆಯಲ್ಲಿಯೇ ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡಿದ ನಂತರ ನೀವು ನಿಪಿ-7ರಂತೆ ಚಾಸಾ-1ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1ರಲ್ಲಿ ಮರದ ದೊಣ್ಣೆ ಯನ್ನು ನಮೂದಿಸಲಾಗಿದೆ ಆದರೆ ನೀವು ಬಿದಿರು ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಯಾವ ದೊಣ್ಣೆಯನ್ನು ಹಾಜರುಪಡಿಸಿದರು ಸದರಿ ದೊಣ್ಣೆಯನ್ನು ವಶಪಡಿಸಿಕೊಂಡಿದ್ದೇನೆ ಎನ್ನುತ್ತಾರೆ. ನಿಮ್ಮ ತನಿಖಾ ಅವಧಿಯಲ್ಲಿ ಬಿದಿರು ದೊಣ್ಣೆಯಿಂದ ಹಲ್ಲೆಯನ್ನು

ಮಾಡಿಲ್ಲ ಮತ್ತು ಯಾವುದೇ ಕೃತ್ಯವು ನಡೆಯದೇ ಇದ್ದರೂ ಸಹ ನೀವು ಚಾಸಾ-1ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದು ನಾಲ್ಕುವರೆ ಅಡಿ ಉದ್ದ ಇದೆ ಎಂದರೆ ಸಾಕ್ಷಿಯು ಸುಮಾರು ನಾಲ್ಕುವರೆ ಅಡಿ ಉದ್ದ ಇರಬಹುದು ಎನ್ನುತ್ತಾರೆ. ನಿಪಿ-2ರಲ್ಲಿ ಮುದ್ದೆ ಮಾಲು-1 ಎಷ್ಟು ಅಡಿ ಉದ್ದ ಇದೆ ಎಂದು ನಿಖರವಾಗಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಮುದ್ದೆ ಮಾಲುಗಳು ಮತ್ತು ಸ್ಥಳದ ಬಗ್ಗೆ ನಿರ್ದಿಷ್ಟವಾದ ಒಕ್ಕಣೆ ಇರಬೇಕು ಎಂಬ ನಿಯಮ ಇದೆ ಎಂದರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಕೃತ್ಯ ನಡೆದ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಚಾಸಾ-1, 3, 5 ಮತ್ತು 6ರವರ ಜೊತೆ ಶಾಮೀಲಾಗಿ ಮುದ್ದೆ ಮಾಲು-1 ಮತ್ತು 2ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1ರವರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಿಪಿ-7ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೆ ಯಾವುದೇ ಸಾಕ್ಷಿದಾರರು ಅವರ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರವರಿಂದ ಸುಳ್ಳು ದೂರನ್ನು ದಾಖಲಿಸಿಕೊಂಡು ನಿಮಗೆ ಅನುಕೂಲ ಆಗುವಂತೆ ತನಿಖೆಯನ್ನು ಮಾಡಿ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**